ಕಾಮ್ ನ್ಯೂಸ್

CAM NEWS

8 ● ಜೂನ್ 2008

## ಆನೆ ಬಂದೀತು, ಜೋಕೆ!

ನೋಡನೋಡುತ್ತಿದ್ದಂತೆ ನಾವು ಈ ವರ್ಷದ ತರಬೇತಿ ಅರ್ಧ ಪೂರೈಸಿ ಮುಂದಿನ ವರ್ಷದ ತರಬೇತಿಗೆ ಅಣಿಯಾಗುತ್ತಿದ್ದೇವೆ. ಈ ನಿಟ್ಟಿನಲ್ಲಿ ಈಗಾಗಲೆ ನಾಲ್ಕಾರು ಹೆಜ್ಜೆ ಮುಂದೆ ಇಟ್ಟಿದ್ದೇವೆ.

ಕಳೆದ ವರ್ಷ ಹುಲಕೋಟಿಯಲ್ಲಿ ಕಾಮ್ ಫೆಲೋ ಗೌರವ ಸ್ವೀಕರಿಸಿ ವಾಪಸಾಗುವ ಮುನ್ನ ಬಿ.ಟಿ. ಪೋಷಿಣಿ ಮೆಲುಮಾತಿನಲ್ಲಿ ಹೇಳಿದ್ದರು: 'ಮುಂದಿನ ವರ್ಷ ನಮ್ಮಲ್ಲಿಗೆ ಬರಬಾರದೇಕೆ?' ಆದರೆ ನಾವು ಧಾರವಾಡಕ್ಕೆ ಬಂದು ಸುಧಾರಿಸಿಕೊಳ್ಳುವಷ್ಟರಲ್ಲಿ ಹುಲಕೋಟಿ ಕೆವಿಕೆ ವರಿಷ್ಠ ಡಾ. ಎಲ್.ಜಿ. ಹಿರೇಗೌಡರ ಕರೆಮಾಡಿ, 'ಮುಂದಿನ ವರ್ಷದ ಕಾರ್ಯಕ್ರಮ ಇನ್ನೆಲ್ಲಾದರೂ ಸಂಘಟಿಸುವ ಯೋಚನೆ ಬೇಡ; ನಮ್ಮಲ್ಲಿಯೇ ಮಾಡೋಣ' ಎಂದಾಗ ಅವರ ಒಲುಮೆ, ಅಭಿಮಾನಕ್ಕೆ ಏನನ್ನಬೇಕೋ ತಿಳಿಯಲಿಲ್ಲ.

ನಮ್ಮ ಮಟ್ಟಿಗೆ ಕಾರ್ಯಕ್ರಮ ಹುಲಕೋಟಿಯಲ್ಲೇ ನಡೆದರೆ ಅನುಕೂಲವೇ. ಆದರೆ ಸಂಪನ್ಮೂಲ ವ್ಯಕ್ತಿಗಳು ಹಾಗೂ ಫೆಲೋಗಳಿಗೆ ಹೊಸ ಜಾಗ ಅಂದರೆ ಹೊಸ ಆಕರ್ಷಣೆ. ಹೀಗಾಗಿ ಕೆವಿಕೆಯ ಆಮಂತ್ರಣವನ್ನು ಜೋಪಾನ ಕಾಯ್ದಿಟ್ಟು ಈ ಬಾರಿ ದಕ್ಷಿಣದತ್ತ ಮುಖಮಾಡಿದ್ದೇವೆ.

ಕಾಮ್ ಫೆಲೋ ಪೋಷಿಣಿ ಅವರು ಕೆಲಸ ಮಾಡುತ್ತಿರುವ ಸ್ವಾಮಿ ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲೂಕಿನ ವಿವೇಕಾನಂದ ಯೂಥ್ ಮೂವ್‌ಮೆಂಟ್ (ಎಸ್‌ವಿವೈಎಂ) ಸಂಸ್ಥೆಯ ಆಶ್ರಯದಲ್ಲಿ ನಮ್ಮ ಕೇಂದ್ರದ 8ನೇ ವಾರ್ಷಿಕೋತ್ಸವ ಬರುವ ಅಕ್ಟೋಬರ್ 19ರಂದು ನಡೆಯಲಿದೆ. ಕಾರ್ಯಕ್ರಮ ಆಯೋಜಿಸುವುದಕ್ಕೆ ಸಂಸ್ಥೆಯ ವರಿಷ್ಠ ಡಾ. ಆರ್. ಬಾಲಸುಬ್ರಮಣ್ಯಂ ಪ್ರೀತಿಯಿಂದ ಸಮ್ಮತಿಸಿದ್ದಾರೆ.

23 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಎಸ್‌ವಿವೈಎಂ ಇಷ್ಟೂ ವರ್ಷಗಳಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿ, ಅದರಲ್ಲೂ ಮುಖ್ಯವಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ, ಮಾಡಿರುವ ಸಾಧನೆ ಅನನ್ಯ. ಹೆಚ್.ಡಿ. ಕೋಟೆ ತಾಲೂಕಿನ ಸರಗೂರು ಮತ್ತು ಕೆಂಚನಹಳ್ಳಿಯಲ್ಲಿ ವಿವೇಕಾನಂದ ಸ್ಮಾರಕ ಆಸ್ಪತ್ರೆ, ಹೊಸಹಳ್ಳಿಯಲ್ಲಿ ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರ ಸೇರಿದಂತೆ ವಿವಿಧೆಡೆ ಶೈಕ್ಷಣಿಕ ಕೇಂದ್ರಗಳನ್ನು ನಡೆಸುತ್ತಿರುವ ಎಸ್‌ವಿವೈಎಂ ಇಂದು ರಾಜ್ಯದೆಲ್ಲೆಡೆ ಚಟುವಟಿಕೆ ಹಮ್ಮಿಕೊಂಡಿದೆ.



ಹೊಸಹಳ್ಳಿಯ ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರ

ಮೈಸೂರಿನಿಂದ 80 ಕಿಲೋ ಮೀಟರ್ ದೂರದಲ್ಲಿ (ರಮಣೀಯ ಕಬಿನಿ ಜಲಾಶಯದ ಪಕ್ಕದಲ್ಲೇ ಸಾಗಬೇಕು) ಕಾಡಂಚಿನಲ್ಲಿದೆ ಹೊಸಹಳ್ಳಿಯ ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರ. ಕಾಡೊಳಗಿನ ಗಿರಿಜನರ ಮಕ್ಕಳಿಗೆ ಅವರಿಗೆ ಹಿತವೆನಿಸುವ ವಾತಾರವಣ ಕಲ್ಪಿಸಿ ಅವರಿಗೆ ಆಪ್ತವೆನಿಸುವ ರೀತಿಯಲ್ಲಿ ಶಿಕ್ಷಣ ನೀಡುವುದು ಈ ಕೇಂದ್ರದ ವೈಶಿಷ್ಟ್ಯ. ನಗರದ ಆಧುನಿಕ ಶಾಲೆಯನ್ನೂ ಮೀರಿಸುವಂತಹ ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್ ಹೊಂದಿರುವ ಈ ಕೇಂದ್ರ ಕೃಷಿ ಕಲಿಕೆಗೂ ಒತ್ತು ನೀಡುತ್ತದೆ. ಮಕ್ಕಳೇ ಸಾವಯವ ತರಕಾರಿಗಳನ್ನು ಬೆಳೆಯುತ್ತಾರೆ. ನೆಲ–ಜಲ ಸಂರಕ್ಷಣೆಗೂ ಕೇಂದ್ರ ಆದ್ಯತೆ ನೀಡಿದೆ. ಸುತ್ತಲೂ ಹಚ್ಚ ಹಸಿರು ಕಾಡು. ಸಂಜೆ ಆರರ ಮೇಲೆ ಆವರಣದಾಚೆ ಆನೆ ಓಡಾಡುವ ಪ್ರದೇಶ ಅಂದರೆ ಆ ಪರಿಸರ ಹೇಗಿದ್ದೀತು ಎಂದು ನೀವೇ ಊಹಿಸಿ.

ಇಂತಹ ಸುಂದರ, ಪ್ರಶಾಂತ ಪರಿಸರದಲ್ಲಿ ಅಕ್ಟೋಬರ್ 17, 18, 19ರಂದು ನಮ್ಮ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ಕೋರ್ಸಿನ ಹೊಸ ತಂಡಕ್ಕೆ ಪ್ರಾಥಮಿಕ ತರಬೇತಿ; ಕೊನೆಯ ದಿನ ಸಂಜೆ ಕೇಂದ್ರದ ವಾರ್ಷಿಕೋತ್ಸವ. ಸಂಪನ್ಮೂಲ ವ್ಯಕ್ತಿಗಳಿಗೆ ಈಗಾಗಲೆ ಶಿಬಿರದ ವೇಳಾಪಟ್ಟಿ ಕಳುಹಿಸಿದ್ದೇವೆ!

ಈ ವರ್ಷದ ಅಭ್ಯರ್ಥಿಗಳು ಹೇಗಿದ್ದಾರೆ? ಇದು ಕಾಮ್ ಹಿತೈಷಿಗಳು ಸಾಮಾನ್ಯವಾಗಿ ನಮ್ಮನ್ನು ಕೇಳುವ ಪ್ರಶ್ನೆ. ಅಭ್ಯರ್ಥಿಗಳ ಪ್ರಗತಿ ಬಗ್ಗೆ ಅವರು ಬರೆದಿರುವ ಲೇಖನಗಳ ಪಟ್ಟಿಯೇ ಸೂಚ್ಯವಾಗಿ ತಿಳಿಸುತ್ತದೆ. 'ಹೆಚ್ಚು ಕೆಲಸದ ಒತ್ತಡ ಇರುವವರಿಗೆ ಬರೆಯುವುದಕ್ಕೂ ಸಮಯ ಲಭ್ಯ' ಇದು ಇಷ್ಟೂ ವರ್ಷಗಳಲ್ಲಿ ನಾವು ಕಂಡುಕೊಂಡ ಅಂಶ. ಡಾ. ರಾಚಪ್ಪ, ಪ್ರಕಾಶ್ ಭಟ್ ಕರ್ಕಿ, ಅಚ್ಚನಹಳ್ಳಿ ಸುಚೇತನ, ಜಯರಾಮ್ ದೇವವೃಂದ, ಪರಮೇಶ್ವರಯ್ಯ ಸೊಪ್ಪಿಮಠ, ಸಿ.ಎಸ್. ಸುರೇಶ್, ಭೂಷಣ್ ಮಿಡಿಗೇಶಿ, ಸಿ. ಶಿವಾನಂದ, ಸೀಮಾ ಶೂರಪಾಲಿ, ಸರ್ವಮಂಗಳಾ ಪಾಟೀಲ್, ಮನೋರಮಾ ಜೋಶಿ ಇವರೆಲ್ಲ ತಂತಮ್ಮ ಕೆಲಸಗಳಲ್ಲಿ ತೊಡಗಿರುವವರು. ಆದರೂ ಬರವಣಿಗೆಯಲ್ಲಿ ಅಮಿತ ಉತ್ಸಾಹ. ಮೂರ್ನಾಲ್ಕು ಅಭ್ಯರ್ಥಿಗಳನ್ನು ಹೊರತುಪಡಿಸಿ ಎಲ್ಲರೂ ಶ್ರದ್ಧೆಯಿಂದ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿರುವುದು ಸಂತಸದ ವಿಚಾರ. ಅನೇಕರು ಕರೆಮಾಡಿ ಅಥವಾ ನಮ್ಮಲ್ಲಿಗೆ ಭೇಟಿ ನೀಡಿ ತಮ್ಮ ಸಂದೇಹ ಬಗೆಹರಿಸಿಕೊಳ್ಳುತ್ತಿರುವುದು ಕೂಡ ಗಮನಾರ್ಹ ಸಂಗತಿ.

ಈ ಮಧ್ಯೆ, ಕಾಮ್ ಫೆಲೋಗಳೂ ಕೂಡ ತಮ್ಮ ಉತ್ಸಾಹ ಕಾಯ್ದುಕೊಂಡಿದ್ದಾರೆ. ಅನುಸೂಯ ಶರ್ಮ ಕನ್ನಡ ಪ್ರಭದಲ್ಲಿ 'ಹಿತ್ತಿಲು' ಅಂಕಣ ಬರೆಯುತ್ತಿದ್ದಾರೆ. ಜಿ. ಶಿವಣ್ಣ, ಬಿ.ಎಂ. ಲವಕುಮಾರ್, ಬಿ.ಟಿ. ಪೋಷಿಣಿ, ಸುಧಾ ರಾಯನಗೌಡರ್, ಶ್ರೀಕಂಠ, ಮತ್ತಿಗಾರ ನಾಗರಾಜ, ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಮೊದಲಾದವರು ಬೇರೆಬೇರೆ ಪತ್ರಿಕೆಗಳಿಗೆ ಹೊಸಹೊಸ ವಿಚಾರಗಳ ಬಗ್ಗೆ ಲೇಖನಗಳನ್ನು ಬರೆಯುತ್ತಿದ್ದಾರೆ.

ಪ್ರತಿ ವಾರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕದ ಕೃಷಿ ಪುಟಗಳಲ್ಲಿ; ಪ್ರತಿ ತಿಂಗಳು ಅಡಿಕೆ ಪತ್ರಿಕೆ, ಸಿರಿ ಸಮೃದ್ಧಿ ಮುಂತಾದ ಕೃಷಿ ಪತ್ರಿಕೆಗಳಲ್ಲಿ ನಮ್ಮ ಫೆಲೋಗಳು ಹಾಗೂ ಅಭ್ಯರ್ಥಿಗಳ ಲೇಖನಗಳನ್ನು ಓದುವುದು ನಮಗೆ ಹೆಮ್ಮೆಯ ಕ್ಷಣ. ಮತ್ತಿಗಾರ ನಾಗರಾಜ ಉದಯವಾಣಿ ಸೇರಿದ್ದಾರೆ. ಸುಮಾ ಪೋತಗೋಡು ದೂರದರ್ಶನದ ಕೃಷಿ ಕಾರ್ಯಕ್ರಮ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ.

ಒಂದು ಅತೀವ ಬೇಸರದ ಸಂಗತಿಯನ್ನೂ ನಿಮ್ಮೊಂದಿಗೆ ಹಂಚಿಕೊಳ್ಳಬೇಕು. ನಮ್ಮ ಫೆಲೋ ಡಾ. ಹೆಚ್.ಕೆ. ಬಸವರಾಜು ಅಕಾಲಿಕ ನಮ್ಮನ್ನಗಲಿದ್ದಾರೆ. 2005ರಲ್ಲಿ 'ಅತ್ಯುತ್ತಮ ಅಭ್ಯರ್ಥಿ' ಹೆಗ್ಗಳಿಕೆಯೊಂದಿಗೆ ಕೋರ್ಸ್ ಪೂರೈಸಿದ ಬಸು ಅವರ ಅಧ್ಯಯನ ಪ್ರಬಂಧ 'ನಂದಿಹಳ್ಳಿಯ ಉದ್ಯಮಶೀಲ ದಂಪತಿ' ಪುಸ್ತಕರೂಪದಲ್ಲಿ ಪ್ರಕಟಗೊಂಡಿತ್ತು. ಆ ಬಳಿಕವೂ ಅವರು ನಮ್ಮೊಂದಿಗೆ ಸಂಪರ್ಕದಲ್ಲಿದ್ದು ಕೇಂದ್ರದ ಚಟುವಟಿಕೆ ಬಗ್ಗೆ ವಿಚಾರಿಸುತ್ತಿದ್ದರು. ಮೂಡಿಗೆರೆಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ತರಬೇತಿ ಸಂಘಟಕರಾಗಿದ್ದ ಬಸು ವಿಧಿಯ ಅಟ್ಟಹಾಸಕ್ಕೆ ಬಲಿದಾದುದು ತೀರ ದುರದೃಷ್ಟಕರ. ಕಾಮ್ ಬಳಗದ ಪರವಾಗಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದೇನೆ.

ಕೊನೆಯ ಮಾತು. ದಯವಿಟ್ಟು ಕಾಮ್ ನ್ಯೂಸ್ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ. ಕನಿಷ್ಠ ಒಂದು ಅಂಚೆ ಕಾರ್ಡ್ ಅಥವಾ ಒಂದು ಎಸೆಮ್ಮೆಸ್ ಕಳುಹಿಸಿದರೂ ಸಾಕು, ನಮಗದು ಸ್ಫೂರ್ತಿದಾಯಕ. ಕಾಮ್ ನ್ಯೂಸ್ ಪ್ರಾಯೋಜಿಸುತ್ತಿರುವ ಹಿತೈಷಿಗಳಿಗೆ ಆಭಾರಿ.

ಅಂತೆಯೇ ಮುಂದಿನ ವರ್ಷದ ತರಬೇತಿಗೆ ಸೂಕ್ತ ಅಭ್ಯರ್ಥಿಗಳನ್ನು ದೊರಕಿಸಿಕೊಡುವಲ್ಲಿಯೂ ನೆರವಾಗಬೇಕಾಗಿ ವಿನಂತಿ. ದಯವಿಟ್ಟು ಕೃಷಿ–ಗ್ರಾಮೀಣ ಪತ್ರಿಕೋದ್ಯಮದಲ್ಲಿ ಆಸಕ್ತಿ ಇರುವ ನಿಮ್ಮ ಸ್ನೇಹಿತರಿಗೆ ಈ ಬಗ್ಗೆ ಹೇಳಿ ಅವರು ಅರ್ಜಿ ಸಲ್ಲಿಸುವಂತೆ ಪ್ರೇರೇಪಿಸಿ.

– ಅನಿತಾ ಪೈಲೂರು

# ರೈತಪರ ಕೃಷಿ ವಿಜ್ಞಾನಿ ಡಾ. ಹೆಚ್.ಕೆ. ಬಸವರಾಜು

– ಗಿರಿಶ್ ಹೆಚ್.ಸಿ.



ಏಪ್ರಿಲ್ 16ರ ಮುಂಜಾನೆ ನಮ್ಮನ್ನಗಲಿದ ಕ್ಯಾಮ್ ಫೆಲೋ ಡಾ. ಹೆಚ್.ಕೆ. ಬಸವರಾಜು ನೇರ ಮಾತಿನ, ಸರಳ ವ್ಯಕ್ತಿತ್ವದ ಕೃಷಿ ವಿಜ್ಞಾನಿ. ಮೂಡಿಗೆರೆಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ತರಬೇತಿ ಸಂಘಟಕರಾಗಿದ್ದ ಅವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಹುದ್ದೆಯಲ್ಲಿದ್ದರು.

ನಾನು ಬಸವರಾಜು ಅವರ ಸಂಪರ್ಕಕ್ಕೆ ಬಂದದ್ದು 2004ರಲ್ಲಿ. ಜಲ ಸಂವರ್ಧನಾ ಯೋಜನೆಗಾಗಿ ಬೆಂಗಳೂರು ಕೃ.ವಿ.ವಿ.ಯಿಂದ ಕೃಷಿ ಸಲಹಾ ಸೇವೆಗಾಗಿ ನಿಯೋಜಿತರಾಗಿದ್ದೆವು. ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಮೂರು ವರ್ಷ ಜೊತೆಯಲ್ಲಿ ಕಾರ್ಯನಿರ್ವಹಿಸಿದ್ದೇವೆ. ನಾನು ಸ್ನಾತಕೋತ್ತರ ಪದವಿ ಮಾಡುವಾಗ ಕಲಿತದ್ದಕ್ಕಿಂತ ಹೆಚ್ಚಿನ ಅನುಭವ ಅವರ ಮಾರ್ಗದರ್ಶನದಲ್ಲಿ ಪಡೆದಿದ್ದೇನೆ.

ಯೋಜನೆಯ ಒಳ ಹೊರಗನ್ನು ಚೆನ್ನಾಗಿ ಅರಿತುಕೊಂಡಿದ್ದ ಬಸವರಾಜು, ರೈತರೊಡನೆ ಉತ್ತಮ ಒಡನಾಟ ಹೊಂದಿದ್ದರು. ರೈತರೊಡನೆ ಸಂವಾದ, ರೈತ ಕ್ಷೇತ್ರ ಪಾಠಶಾಲೆ, ಕೃಷಿ ಪ್ರಾತ್ಯಕ್ಷಿಕೆ ಹೀಗೆ ವಿವಿಧ ಚಟುವಟಿಕೆಗಳಲ್ಲಿ ಅವರ ಪರಿಶ್ರಮ ಅಪಾರ. ಯಾವುದೇ ಕಾರ್ಯಕ್ರಮವಾಗಿರಲಿ ಅದನ್ನು ಅಚ್ಚುಕಟ್ಟಾಗಿ, ಪರಿಣಾಮಕಾರಿಯಾಗಿ ಆಯೋಜಿಸುತ್ತಿದ್ದರು. ಕೃಷಿಕರ ಸಂದೇಹಗಳಿಗೆ, ಹೆಚ್ಚಿನ ಮಾಹಿತಿಯ ಅಗತ್ಯಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿದ್ದರು. ಮಾಧ್ಯಮಗಳಿಂದ ಬಸವರಾಜು ಅವರ ನಿಧನದ ಸುದ್ದಿ ತಿಳಿದ ತಕ್ಷಣ ನನಗೆ ಅನೇಕ ರೈತರು ದೂರವಾಣಿ ಕರೆ ಮಾಡಿದರು. ಇದು ರೈತರು ಬಸವರಾಜು ಅವರ ಮೇಲೆ ಹೊಂದಿದ್ದ ಅಭಿಮಾನ, ಕಾಳಜಿಗೆ ಸಾಕ್ಷಿ.

ಜಲಸಂವರ್ಧನಾ ಯೋಜನೆಯಲ್ಲಿದ್ದಾಗಲೇ ಕೃಷಿ ಮಾಧ್ಯಮ ಕೇಂದ್ರದ ಸಂಪರ್ಕಕ್ಕೆ ಬಂದ ಬಸವರಾಜು ಅವರು 2004–05ನೇ ಸಾಲಿನಲ್ಲಿ ಕೃಷಿ-ಗ್ರಾಮೀಣ ಪತ್ರಿಕೋದ್ಯಮ ತರಬೇತಿ ಪಡೆದು ಕೆಲವು ಉತ್ತಮ ಲೇಖನಗಳನ್ನು ಬರೆದರು. 'ವರ್ಷದ ಉತ್ತಮ ಅಭ್ಯರ್ಥಿ' ಗೌರವಕ್ಕೂ ಅವರು ಪಾತ್ರರಾದರು. ಈ ತರಬೇತಿಯ ಅಗತ್ಯವನ್ನು ಅರಿತು ನನ್ನನ್ನೂ ಅದಕ್ಕೆ ಸೇರಲು ಹುರಿದುಂಬಿಸಿದರು. ಈ ಪ್ರೇರಣೆಯಿಂದ ಮುಂದೆ ನಾನು ಕಾಮ್ ಬಳಗದ ಸದಸ್ಯನಾದೆ. ಬಸವರಾಜು ಅವರ ಸಲಹೆ, ಮಾರ್ಗದರ್ಶನ ನನ್ನ ಬರವಣಿಗೆಯನ್ನು ಸಾಕಷ್ಟು ಸುಧಾರಿಸಿದೆ. ಹೀಗೆ ತಮ್ಮ ಸಹವರ್ತಿಗಳ ಆಸಕ್ತಿ ಮತ್ತಷ್ಟು ಬೆಳೆಯಲು, ಪ್ರತಿಭೆ ಬೆಳಕಿಗೆ ಬರಲು ಅವರ ಸಹಕಾರ ಇದ್ದೇ ಇರುತ್ತಿತ್ತು.

ಕರ್ತವ್ಯ ನಿಷ್ಠೆಗೆ ಹೆಸರಾಗಿದ್ದ ಬಸವರಾಜು ತಮ್ಮ ಸಹ ಅಧಿಕಾರಿಗಳು, ಸಿಬ್ಬಂದಿಗಳೊಡನೆ ಉತ್ತಮ ಬಾಂಧವ್ಯ ಹೊಂದಿದ್ದರು. ಕ್ರಿಕೆಟ್ ಮತ್ತು ಪುಸ್ತಕ ಅವರ ಎರಡು ಆಸಕ್ತಿಗಳು. ವಿಶ್ವವಿದ್ಯಾಲಯಗಳ ವಿಜ್ಞಾನ ಹಾಗೂ ರೈತರ ಜ್ಞಾನ ಎರಡರ ಬಗ್ಗೆಯೂ ಸಮಾನ ಆಸಕ್ತಿ, ಗೌರವ ತೋರುತ್ತಿದ್ದ ಬಸವರಾಜು ಅವರ ಆಕಸ್ಮಿಕ ಅಗಲಿಕೆ ಎಲ್ಲರಿಗೂ ನೋವು ತಂದಿದೆ.

**ದಾಂಪತ್ಯ ಬದುಕಿಗೆ ಕಾಲಿಟ್ಟವರಿಗೆ ಶುಭಾಶಯ**

- ಕಾಮ್ ಫೆಲೋ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಮತ್ತು ವಿಶಾಲಾಕ್ಷಿ
- ಕಾಮ್ ಫೆಲೋ ಪುಷ್ಪಾ ಎಂ. ಕಮ್ಮಾರ್ ಅವರ ಮಗಳು ಉಮಾ ಮತ್ತು ಸಿದ್ಧನಗೌಡ
- ಕಾಮ್ ಬಳಗದ ರಮೇಶ ಚಂಡೆಪ್ಪನವರ ಮತ್ತು ಲಕ್ಷ್ಮೀ

**ಕಾಮ್ ಸಂಪನ್ಮೂಲ ವ್ಯಕ್ತಿ ನಾಗೇಶ ಹೆಗಡೆ 60ಕ್ಕೆ ಕಾಲಿಟ್ಟಿದ್ದಾರೆ. ಬೆಂಗಳೂರಿನಲ್ಲಿ ಈಚೆಗೆ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಡಾ. ಕೆ. ಉಲ್ಲಾಸ ಕಾರಂತ, ನಾಗೇಶ ಹೆಗಡೆ ಮತ್ತು ಡಾ. ಎಚ್.ಆರ್. ಕೃಷ್ಣಮೂರ್ತಿ ಅಭಿನಂದನ ಗ್ರಂಥ 'ಸಂಕುಲ' ಬಿಡುಗಡೆಯಾಗಿದೆ.**

## ಕಾಮ್ ಫೆಲೋಗಳ ಇತ್ತೀಚಿನ ಪ್ರಕಟಿತ ಲೇಖನಗಳು

**ಬಹೂಪಯೋಗಿ ಪುಂಡಿ ಗಿಡ**
(ಅಡಿಕೆ ಪತ್ರಿಕೆ, ಜೂನ್ 2008)
– ಅನುಸೂಯ ಶರ್ಮ

**ಬಂಪರ್ ಬೆಳೆ ಬಂದರೂ ಬದುಕು ಭಾರವೇಕೆ?**
(ಉದಯವಾಣಿ, 14.04.2008)
– ಅನುಸೂಯ ಶರ್ಮ

**ಹೆಚ್ಚುವರಿ ಆದಾಯಕ್ಕೆ ಮೌಲ್ಯವರ್ಧನೆ**
(ಕೃಷಿ ವೈಭವ, ಏಪ್ರಿಲ್ 2008)
– ಅನುಸೂಯ ಶರ್ಮ

**ಸಾವಯವ ಕೃಷಿಯಲ್ಲಿ ಸೀಬೆ, ಸಪೋಟ**
(ಪ್ರಜಾವಾಣಿ, 8.03.2008)
– ಜಿ. ಶಿವಣ್ಣ ಕೊತ್ತೀಪುರ

**ವೀಳ್ಯದೆಲೆಗೆ ವಿಚಿತ್ರ ರೋಗ**
(ಪ್ರಜಾವಾಣಿ, 27.03.2008)
– ಜಿ. ಶಿವಣ್ಣ ಕೊತ್ತೀಪುರ

**ಮಾಸಿಕ ವರಮಾನದ ಮಾದರಿ ರೇಷ್ಮೆ**
(ವಿಜಯ ಕರ್ನಾಟಕ, 07.05.2008)
– ಜಿ. ಶಿವಣ್ಣ ಕೊತ್ತೀಪುರ

**ಒಂದೇ ಹೊಲದಲ್ಲಿ ಮೂವತ್ತು ತಳ ರಾಗಿ**
(ವಿಜಯ ಕರ್ನಾಟಕ, 28.05.2008)
– ಜಿ. ಶಿವಣ್ಣ ಕೊತ್ತೀಪುರ

**ರೈತರಿಂದ ರೈತರಿಗೆ ಗ್ರಾಮಚೇತನ**
(ಕರ್ಮವೀರ, 24.02.2008)
– ಬಿ.ಎಂ. ಲವಕುಮಾರ್

**ಕುಬ್ಜ ಮರಗಳ ಅಪೂರ್ವ ಲೋಕ**
(ಹೊಸದಿಗಂತ, 13.04.2008)
– ಬಿ.ಎಂ. ಲವಕುಮಾರ್

**ಕೊಡಗಿನಲ್ಲಿ ಪ್ರವಾಸಿಗರಿಗಾಗಿ ಆತಿಥ್ಯದ ಮನೆಗಳು**
(ಕರ್ಮವೀರ, 20.04.2008)
– ಬಿ.ಎಂ. ಲವಕುಮಾರ್

**ನೀಳ ಜಡೆಯ ಬಣ್ಣದ ಬೆಡಗಿ ಹೆಲಿಕೋನಿಯಾ**
(ಕರ್ಮವೀರ, 20.04.2008)
– ಬಿ.ಎಂ. ಲವಕುಮಾರ್

**ಕಾಡು ಕುಸುಮಗಳಿಗೆ ಕೃಷಿ ಪಾಠ**
(ಪ್ರಜಾವಾಣಿ, 8.03.2008)
– ಬಿ.ಟಿ. ಪೋಷಿಣಿ

**ದನಿಯಿದೆ ನನಗೂ ಕೇಳದೆ ನಿಮಗೂ?**
(ಪ್ರಜಾವಾಣಿ, 5.04.2008)
– ಬಿ.ಟಿ. ಪೋಷಿಣಿ

**ಗಿರಿಜನ ಮಹಿಳೆಯ ಕೃಷಿ ಸಾಧನೆ**
(ಸಿರಿಸಮೃದ್ಧಿ, ಮೇ 2008)
– ಬಿ.ಟಿ. ಪೋಷಿಣಿ

**ಕಟ್ಟಿಗೆ ಒಲೆಗೆ ಒಗ್ಗುವ ಕಿಸಾನ್ ಕುಕ್ಕರ್**
(ಅಡಿಕೆ ಪತ್ರಿಕೆ, ಮಾರ್ಚ್ 2008)
– ಸುಧಾ ರಾಯನಗೌಡರ್

**ಗುಳ್ಳಡಿಕೆ ಸವಿದಿದ್ದೀರಾ?**
(ಅಡಿಕೆ ಪತ್ರಿಕೆ, ಏಪ್ರಿಲ್ 2008)
– ಸುಧಾ ರಾಯನಗೌಡರ್

**ಮಣ್ಣಿನಲ್ಲಿ ಹಸಿರು ಹೊನ್ನು ಕಂಡ ದೇವೇಂದ್ರಪ್ಪನವರು**
(ಕೃಷಿ-ಕಾಮಧೇನು, ಏಪ್ರಿಲ್ 2008)
– ಸುಧಾ ರಾಯನಗೌಡರ್

**ಬಾಳೆನಾರು ಉದ್ಯಮದ ಅಂತರಂಗ**
(ಸಿರಿ ಸಮೃದ್ಧಿ, ಮಾರ್ಚ್ 2008)
– ಶ್ರೀಕಂಠ

**ವಿನಾ ಕೃಷಿನಾಂ ನ ಜೀವನಂ**
(ಸಿರಿಸಮೃದ್ಧಿ, ಮೇ 2008)
– ಶ್ರೀಕಂಠ

**ಮನೆಯ ಸುತ್ತ ಹಸುರಿನ ಹಂದರ**
(ಪ್ರಜಾವಾಣಿ, 22.05.2008)
– ಶ್ರೀಕಂಠ

**ಜಾನುವಾರು ಜಾತ್ರೆ ಮುಂಜಾಗ್ರತೆ ಇರಲಿ**
(ವಿಜಯ ಕರ್ನಾಟಕ, 12.03.2008)
– ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ

**ಜಾನುವಾರುಗಳಲ್ಲಿ ಖನಿಜಾಂಶ ಕೊರತೆ ಪರಿಹಾರಕ್ಕೆ ಸರಳ ಸೂತ್ರಗಳು**
(ವಿಜಯ ಕರ್ನಾಟಕ, 9.04.2008)
– ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ

**ರೇಬೀಸ್ ವಿರುದ್ಧ ಇಡ್ಕಿದು ಸಾಧನೆ**
(ವಿಜಯ ಕರ್ನಾಟಕ, 30.04.2008)
– ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ

**ಬೆತ್ತದ ಬದಲು ಡ್ರಿಪ್ ಪೈಪ್ ಬುಟ್ಟಿ**
(ಉದಯವಾಣಿ, 3.03.2008)
– ನಾಗರಾಜ ಮತ್ತಿಗಾರ

**ಜೇನಿಗೆ ಹಂಚಿನ ಮನೆ**
(ಉದಯವಾಣಿ, 17.03.2008)
– ನಾಗರಾಜ ಮತ್ತಿಗಾರ

**ಬಹುಪಯೋಗಿ ಬಣ್ಣದ ಹರಳು**
(ಸಿರಿಸಮೃದ್ಧಿ, ಮೇ 2008)
– ಕೆ. ರೇಖಾ ಸಂಪತ್

**ಗ್ರಾಮಕ್ಕೇ ಹೆಸರು ತಂದ 'ಜಾಣಗೆರೆ ಹಲಸು'**
(ಅಡಿಕೆ ಪತ್ರಿಕೆ, ಮೇ 2008)
– ಕೆ. ರೇಖಾ ಸಂಪತ್

**ಸಾವಯವ ಸಾಧಕ ಸಿದ್ದರಾಮಯ್ಯ**
(ಸಿರಿಸಮೃದ್ಧಿ, ಮೇ 2008)
– ಹೆಚ್.ವಿ. ದಿವ್ಯಾ

**ಧಾನ್ಯ ಸಂರಕ್ಷಣೆಯ ಸುಲಭೋಪಾಯ**
(ಅಡಿಕೆ ಪತ್ರಿಕೆ, ಮೇ 2008)
– ಹೆಚ್.ವಿ. ದಿವ್ಯಾ

**ಒಂದು ಸರಳ ಬೀಜ ಪರೀಕ್ಷೆ**
(ಪ್ರಜಾವಾಣಿ, 8.03.2008)
– ಜೆ. ಭೋಜರಾಜ್

**ನಿರುಪಯುಕ್ತ ನೆಲ ನಿಜವಾಗಿಯೂ ನಿರುಪಯುಕ್ತವೇ?**
(ಸಿರಿಸಮೃದ್ಧಿ, ಮೇ 2008)
– ಲಲಿತಾ ರಾವ್ ಎಂ.ಜಿ.

**ಮಾಣಿಮೂಲೆಯ ಜೀವಸೆಲೆ ಸುರಂಗ**
(ಅಡಿಕೆ ಪತ್ರಿಕೆ, ಮೇ 2008)
– ರವಿಶಂಕರ ದೊಡ್ಡಮಾಣಿ

**ವೈಟೆಪ್ ಯೋಜನೆ ಆರ್ಥಿಕ ಸ್ವಾವಲಂಬನೆಗೆ ರಹದಾರಿ**
(ಸಂಯುಕ್ತ ಕರ್ನಾಟಕ, 14.05.2008)
– ಸುಶೀಲಾ ಬಿ. ಪಾಟೀಲ

**Giving new life to bamboo**
(Sopanstep, April 2008)
- Ravishankar Doddamani

**ಕನ್ನಡ ಪ್ರಭ 'ಹಿತ್ತಿಲು' ಅಂಕಣದಲ್ಲಿ ಪ್ರಕಟವಾದ ಅನುಸೂಯ ಶರ್ಮ ಅವರ ಲೇಖನಗಳು**

**ಆಹಾಹ ಮಲ್ಲಿಗೆ, ಬರುವೆನೆ ನಿನ್ನಲ್ಲಿಗೆ**
(23.03.2008)

**ಒತ್ತೊತ್ತು ಮನೆಗಳಲ್ಲಿ ಹುಡುಕಿ ಹಿತ್ತಿಲು**
(29.03.2008)

**ಕರಿಬೇವು ಬೆಳೆಯುವುದು ಸುಲಭ**
(5.04.2008)

**ಹಿತ್ತಲಿನ ಹತ್ತು ಉಪಯೋಗಗಳು**
(12.04.2008)

**ಗಿಡ ನೆಡು, ಗಿಡ ನೆಡು: ಅಲ್ಪ ಜಾಗದಲ್ಲಿ ಸ್ವಲ್ಪ ಹಸಿರು**
(19.04.2008)

**ಕಸಿ ಮಾಡಿ ಖುಷಿ ಪಡಿ**
(26.04.2008)

**ಚೈತ್ರದ ಚಿತ್ರಾಂಗಿಯ ನರ್ತನ**
(3.05.2008)

**ತೋಟದ ಸೊಗಸಿಗೆ ಅಲಂಕಾರಿಕ ಸಸ್ಯಗಳು**
(10.05.2008)

**ವಾರ್ಷಿಕ ಹಬ್ಬು ಬಳ್ಳಿಗಳು: ಮಹಡಿ ಏರಿ ನಗುವ ಮಲ್ಲಿಗೆ**
(17.05..2008)

**ಬೆಳೆಯಿರಿ ತರಹೇವಾರಿ ತರಕಾರಿ: ಮನೆಯ ಆವರಣಕ್ಕೆ ಹೂವಿನ ತೋರಣ**
(24.05.2008)

---

## ಕಾಮ್ ಅಭ್ಯರ್ಥಿಗಳ ಇತ್ತೀಚಿನ ಪ್ರಕಟಿತ ಲೇಖನಗಳು

**ಹಾಲು: ಇಂದಿನ ಉಳಿಕೆ, ಮುಂದಿನ ಗಳಿಕೆ**
(ಪ್ರಜಾವಾಣಿ, 06.03.2008)
– ಡಾ. ರಾಚಪ್ಪ ಎಚ್.

**'ಐರಾವತ'ನಿಗೆ ಮಣಿದ ನೀಲಾಂಬಿಕೆ**
(ಪ್ರಜಾವಾಣಿ, 13.03.2008)
– ಡಾ. ರಾಚಪ್ಪ ಎಚ್.

**ಉತ್ಕೃಷ್ಟ ಸಾವಯವ ಗೊಬ್ಬರ**
(ಪ್ರಜಾವಾಣಿ, 27.03.2008)
– ಡಾ. ರಾಚಪ್ಪ ಎಚ್.

**ಮುಂಜಾಗ್ರತೆಯೇ ಮಹತ್ವದ ಮದ್ದು**
(ಸಂಯುಕ್ತ ಕರ್ನಾಟಕ, 19.03.2008)
– ಡಾ. ರಾಚಪ್ಪ ಎಚ್.

**ಅಕಾಲಿಕ ಮಳೆಗೆ ಕಾಲವಾದವು ಕುರಿಗಳು**
(ವಿಜಯ ಕರ್ನಾಟಕ, 30.04.2008)
– ಡಾ. ರಾಚಪ್ಪ ಎಚ್.

**ಏರುತ್ತಿರುವ ಎತ್ತುಗಳ ದರ**
(ವಿಜಯ ಕರ್ನಾಟಕ, 21.05.2008)
–ಡಾ. ರಾಚಪ್ಪ ಎಚ್.

**ಅಂಗವಿಕಲ ಆಡುಗಳ ಆಶ್ರಯಧಾಮ**
(ಪ್ರಜಾವಾಣಿ, 22.05.2008)
–ಡಾ. ರಾಚಪ್ಪ ಎಚ್.

**ಅಕಾಲಿಕ ಮಳೆ – ಕಾಫಿ ಬೆಳೆಗಾರರಿಗೆ ಸಿಹಿಯಷ್ಟೇ ಕಹಿ**
(ವಿಜಯ ಕರ್ನಾಟಕ, 27.02.2008)
– ಅಚ್ಚನಹಳ್ಳಿ ಸುಚೇತನ

**ಮಳೆಯಷ್ಟೇ ಅನಿಶ್ಚಿತ ಈ ಮಳೆ ವಿಮೆ**
(ಅಡಿಕೆ ಪತ್ರಿಕೆ, ಏಪ್ರಿಲ್ 2008)
– ಅಚ್ಚನಹಳ್ಳಿ ಸುಚೇತನ

**ಹಾಲೆಂಡಿನಿಂದ ಮಲೆನಾಡಿಗೆ ಅಂತೋರಿಯಮ್**
(ವಿಜಯ ಕರ್ನಾಟಕ, 19.03.2008)
– ಅಚ್ಚನಹಳ್ಳಿ ಸುಚೇತನ

**ಕಾಫಿ ಪಲ್ಪರ್ ನೀರು ಕೃಷಿ ಯೋಗ್ಯವೇ?**
(ಪ್ರಜಾವಾಣಿ, 01.05.2008)
– ಅಚ್ಚನಹಳ್ಳಿ ಸುಚೇತನ

**ಕೃಷಿ ಉತ್ಪನ್ನಗಳ ಅಂದವರ್ಧನೆ**
(ಪ್ರಜಾವಾಣಿ, 28.02.008)
– ಪ್ರಕಾಶ್ ಭಟ್ ಕರ್ಕಿ

**ಕುಮಟಾದ 'ಬಂಡಿ ಬೀಜ'**
(ಅಡಿಕೆ ಪತ್ರಿಕೆ, ಜೂನ್ 2008)
– ಪ್ರಕಾಶ್ ಭಟ್ ಕರ್ಕಿ

**ತೋಟಕ್ಕಿಳಿದ ಬೈಕ್ ಟ್ರೈಲರ್**
(ವಿಜಯ ಕರ್ನಾಟಕ, 07.05..2008)
– ಪ್ರಕಾಶ್ ಭಟ್ ಕರ್ಕಿ

**'ಆಲ್-ಇನ್-ಒನ್' ಕೃಷಿ ಟಾನಿಕ್!**
(ಸಿರಿ ಸಮೃದ್ಧಿ, ಏಪ್ರಿಲ್ 2008)
– ಪ್ರಕಾಶ್ ಭಟ್ ಕರ್ಕಿ

**ಚಂದ್ರಗಿರಿ ಏಕೆ ಕಿರಿಕಿರಿ?**
(ಕೃಷಿಕ, ಜನವರಿ-ಫೆಬ್ರವರಿ 2008)
– ಜಯರಾಮ್ ಆರ್. ದೇವವೃಂದ

**ಕತ್ತಾಳೆ ನಡುವಣ ಕಷ್ಟದ ಬದುಕು**
(ವಿಜಯ ಕರ್ನಾಟಕ, 05.03.2008)
– ಪರಮೇಶ್ವರಯ್ಯ ಸೊಪ್ಪಿಮಠ

**ಎಲ್ಲಾ ಮಾಯ.. ನಾಳೆ ಹಗೇವು ಮಾಯ!**
(ವಿಜಯ ಕರ್ನಾಟಕ, 30.04.2008)
– ಪರಮೇಶ್ವರಯ್ಯ ಸೊಪ್ಪಿಮಠ

**ಬೆಲ್ಲ ತಯಾರಿಕೆಯಿಂದ ನೆಮ್ಮದಿಯ ಬದುಕು**
(ಅನ್ನದಾತ, ಫೆಬ್ರವರಿ 2008)
– ಭೂಷಣ್ ಮಿಡಿಗೇಶಿ

**ಡಬಲ್ ಬೀನ್ಸ್ ಬೆಳೆ ಡಬಲ್ ಆದಾಯ ಹೊಳೆ**
(ಅನ್ನದಾತ, ಮಾರ್ಚ್ 2008)
– ಭೂಷಣ್ ಮಿಡಿಗೇಶಿ

**ಮಲೆನಾಡಿನ ಸಿಹಿನೀರಿನಲ್ಲಿ ಸೀಗಡಿ ಕೃಷಿ – ಕಾಫಿ ಬೆಳೆಗಾರರಿಗೆ ಉಪಬೆಳೆಯಾಗಬಹುದೇ?**
(ಕೃಷಿಕ, ಜನವರಿ-ಫೆಬ್ರವರಿ 2008)
– ಜಯರಾಮ್ ಆರ್. ದೇವವೃಂದ

**ಕಹಿಯಾದ ಬೆಲ್ಲ – ಸಿಹಿಯಾಗದ ಸಕ್ಕರೆ**
(ಉದಯವಾಣಿ, 22.03.2008)
– ಸಿ. ಶಿವಾನಂದ

**ವ್ಯವಸಾಯದಲ್ಲೊಂದು ಹೊಸ ಪ್ರಯೋಗ**
(ಜನಪದ, ಏಪ್ರಿಲ್ 2008)
– ಸಿ. ಶಿವಾನಂದ

**ಬೀಜೋತ್ಪಾದನೆಯತ್ತ ಒಲವು, ಆರ್ಥಿಕ ಗೆಲುವು**
(ವಿಜಯ ಕರ್ನಾಟಕ, 26.03.2008)
– ಸೀಮಾ ವಿ. ಶೂರಪಾಲಿ

**ದೇವಲೋಕ ಈ ನಂದನವನ**
(ಜನಪದ, ಮೇ 2008)
– ಸೀಮಾ ವಿ. ಶೂರಪಾಲಿ

**ಮಲೆನಾಡ ಮಿಠಾಯಿ 'ಸುಕೇಳಿ'**
(ಅಡಿಕೆ ಪತ್ರಿಕೆ, ಏಪ್ರಿಲ್ 2008)
– ಮನೋರಮಾ ಜೋಶಿ

**ಮೌನಕ್ರಾಂತಿಗೆ ಕಹಳೆಯಾಯಿತು ವಿಶ್ವಭಾರತಿ**
(ವಿಜಯ ಕರ್ನಾಟಕ, 14.05.2008)
– ಸರ್ವಮಂಗಳ ಬಿ. ಪಾಟೀಲ್

**ಕೊಡಗಿನ ಕಿತ್ತಳೆಗೆ ಪುನಶ್ಚೇತನ**
(ಪ್ರಜಾವಾಣಿ, 15.05.2008)
–ಸಿ.ಎಸ್. ಸುರೇಶ್

ಅಭ್ಯರ್ಥಿಗಳಿಗೆ ಸೂಚನೆ:
ಅಧ್ಯಯನ ಪ್ರಬಂಧಕ್ಕೆ ಸಂಬಂಧಿಸಿ ಪ್ರತಿ ತಿಂಗಳೂ ಪ್ರಗತಿ ವರದಿ ನೀಡುವುದು ಅಗತ್ಯ.

## ಅನಿಸಿಕೆ

ಬಹಳ ಕುತೂಹಲದಿಂದ ಕಾಮ್ ನ್ಯೂಸ್ ಅನ್ನು ಗಮನಿಸುತ್ತಿದ್ದೇನೆ. ಫ್ರೀಲಾನ್ಸಿಯಾಗಿ ಆರಂಭಿಸುವಾಗ ಇಂತಹ ಮಾಧ್ಯಮಕ್ಕಾಗಿ ಹಪಹಪಿಸುತ್ತಿದ್ದೆ. ಆಗ 'ಪತ್ರೆ ನ್ಯೂಸ್' ಅನ್ನು ಅವಲಂಬಿಸುತ್ತಿದ್ದೆ. ಅವರು ನಮ್ಮನ್ನು ಕೃಷಿ ಬರಹಗಾರರಾಗಿ ರೂಪಿಸಿದವರು.

ಅಕ್ಟೋಬರ್ 2007ರ ಸಂಚಿಕೆ ಪುನರ್ಮನನ ಶಿಬಿರ ಕುರಿತ ವರದಿಯೊಂದಿಗೆ ಚೆನ್ನಾಗಿ ಮೂಡಿಬಂದಿದೆ. ಅಂಕಣ, ವಿನ್ಯಾಸ ಚೆನ್ನಾಗಿತ್ತು. ಕೃಷಿ/ಬರಹ ಕುರಿತು ಎಸ್ಸೆಮ್ಮೆಸ್ ಕಾಲಂ ಇದ್ದರೆ ಚೆನ್ನ. ಸಮಾನ ಮನಸ್ಕರನ್ನದು ಜೋಡಿಸಲಿ. ಮಾಧ್ಯಮದ ಈ ವೇದಿಕೆಗೊಂದಿಷ್ಟು ರಂಗೇರಲಿ.

**– ಚಂದ್ರಶೇಖರ ಯೇತಡ್ಕ, ಕಾಸರಗೋಡು**

ಕಾಮ್ ನ್ಯೂಸ್ ತಲುಪಿದೆ. ನಿಮ್ಮ ಸಾಹಸ ಯಶಸ್ಸು ಕಾಣುತ್ತಿದೆ.

**– ಮುರಳೀಧರ ಉಪಾಧ್ಯ ಹಿರಿಯಡಕ, ದೊಡ್ಡನಗುಡ್ಡೆ**

ತರಬೇತಿಯನ್ನು ಪೂರ್ಣಗೊಳಿಸಿದ ನಂತರವೂ ಕೇಂದ್ರದ ಚಟುವಟಿಕೆಗಳೊಂದಿಗೆ ನಮ್ಮನ್ನು ನಾವು ಗುರುತಿಸಿಕೊಳ್ಳಲು ಕಾಮ್ ನ್ಯೂಸ್ ಸಹಕರಿಸುತ್ತಿದೆ, ನಮ್ಮ ಬರವಣಿಗೆಯ ಮುಂದುವರಿಕೆಗೂ ಸಹಾಯ ಮಾಡುತ್ತಿದೆ.

**– ಶ್ರೀಕಂಠ, ಬೆಂಗಳೂರು**

ತಾವು ಕಳುಹಿಸಿದ ಕಾಮ್ ನ್ಯೂಸ್ ತಲುಪಿದೆ. ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವವರ ಬರಹಗಳು ಪತ್ರಿಕೆಗಳಲ್ಲಿ ನಿರಂತರವಾಗಿ ಪ್ರಕಟವಾಗುತ್ತಿರುವುದು ನೋಡಿ ಸಂತೋಷವಾಗುತ್ತಿದೆ. ಕೇಂದ್ರದ ಅಭ್ಯರ್ಥಿಯಾಗಿ ಪಡೆದ ತರಬೇತಿ ವೃತ್ತಿ ಜೀವನದಲ್ಲಿ ಉಪಯುಕ್ತವಾಗಿದೆ.

**– ಬಿ.ಎಂ. ಲವಕುಮಾರ್, ಮೈಸೂರು**

**ಫೋನ್/ಪತ್ರ/ಈ-ಮೇಲ್/ಎಸ್‌ಎಂಎಸ್ ಮೂಲಕ ಸ್ಪಂದನ –**

ಪ್ರೊ. ಬಿ.ಎ. ವಿವೇಕ ರೈ, ಡಾ. ನಾ. ದಾಮೋದರ ಶೆಟ್ಟಿ, ಕೆ.ಪಿ. ಬಾಲಸುಬ್ರಹ್ಮಣ್ಯ, ರವಿಶಂಕರ ದೊಡ್ಡಮಾಣಿ, ಅನಂದತೀರ್ಥ ಪ್ಯಾಟಿ, ಬೆಂಗಳ ವೆಂಕಟೇಶ, ಬಂದಗದ್ದೆ ರಾಧಾಕೃಷ್ಣ, ಶಕುಂತಲಾ ಐಯ್ಯರ್, ರಾಜು ಅಡಕಳ್ಳಿ, ಸೋಮಶೇಖರ ರೂಳ, ಗಾಣಧಾಳು ಶ್ರೀಕಂಠ, ಗಿರೀಶ್ ಹೆಚ್.ಸಿ, ಡಾ. ರಾಚಪ್ಪ, ರೇಖಾ ಸಂಪತ್, ಅನುಸೂಯ ಶರ್ಮ, ಲಲಿತಾ ರಾವ್, ರಾಜಶೇಖರ ಹೆಗಡೆ

## ಹೊಸ ಪುಸ್ತಕ – ಪತ್ರಿಕೆ




**ನೆಲದವರು**

**ಕೃಷಿ; ಕಥೆ–ವ್ಯಥೆ**

– ನರೇಂದ್ರ ರೈ ದೇರ್ಲ

ಬೆಲೆ: ರೂ.75

ಅನ್ನ ತಿನ್ನುವ ಯಾರೊಬ್ಬರೂ ಈ ನೆಲದ ಭಾಷೆಗೆ ಕಿವಿಗೊಡದೆ ಹೋದಾಗ; ಅದನ್ನು ಉಳಿಸಲು ಪ್ರಯತ್ನಿಸದೇ ಇದ್ದಾಗ ವ್ಯಕ್ತವಾಗುವ ಆಲೋಚನೆ, ಅಭಿವ್ಯಕ್ತಿ ಎಲ್ಲವೂ ನಕಲಿಗಳಾಗುವ ಅಪಾಯ ಇದ್ದೇ ಇದೆ ಅನ್ನಿಸುತ್ತದೆ ಎನ್ನುವ ಅಭಿವೃದ್ಧಿ ಬರಹಗಾರ ದೇರ್ಲ, ಬೇರೆಬೇರೆ ಪತ್ರಿಕೆಗಳಲ್ಲಿ ಬರೆದಿರುವ 37 ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ನಡುನಡುವೆ ಎಂ.ಎಸ್. ಮೂರ್ತಿ ಅವರ ರೇಖಾಚಿತ್ರಗಳಿವೆ.

ಪ್ರತಿಗಳಿಗೆ: ಕನಸು ಪ್ರಕಾಶನ
ಮಾಡಾವು ಅಂಚೆ, ಪುತ್ತೂರು ತಾಲೂಕು
ದಕ್ಷಿಣ ಕನ್ನಡ
08251-276569; 9448888650




**ಕೃಷಿ ಕಾಮಧೇನು**

ಕೃಷಿ ಹಾಗೂ ಗ್ರಾಮಾಭಿವೃದ್ಧಿ ಕುರಿತ ಮಾಸಪತ್ರಿಕೆ

ಸಂಪಾದಕ: ಡಾ. ವಿರೂಪಾಕ್ಷ ಬಡಿಗೇರ

ಆಕಾಶವಾಣಿ ಕೃಷಿ ರಂಗ ವಿಭಾಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಬರಹಗಾರ ಡಾ. ವಿರೂಪಾಕ್ಷ ಬಡಿಗೇರ ಅವರು ಹೊರತರುತ್ತಿರುವ ಈ ಮಾಸಪತ್ರಿಕೆ ರೈತರಿಗೂ ಕೃಷಿ ಸಂಶೋಧನಾ ರಂಗಕ್ಕೂ ನಡುವಿನ ಕೊಂಡಿಯಂತಿದೆ.

ವಾರ್ಷಿಕ ಚಂದಾ : ರೂ. 120

ವಿಳಾಸ: ಸಂಪಾದಕರು, ಕೃಷಿ ಕಾಮಧೇನು ಮಾಸಪತ್ರಿಕೆ, 'ಕಾಳಿಕಾ', 37–ಬಿ, ಶಾಂತಿನಿಕೇತನ ನಗರ, ಕೆಲಗೇರಿ ರಸ್ತೆ
ಧಾರವಾಡ 580 007
ದೂರವಾಣಿ: 9449071840



**ಸಾವಯವ ತೋಟಗಾರಿಕೆ**

– ಎನ್. ಕೇಶವ ಮೂರ್ತಿ




**ಸುಖದ ಜೀವನಕ್ಕೆ ಜೈವಿಕ ಕೃಷಿ**

– ವಿಜಯ ಅಂಗಡಿ

ಮೊದಲನೇ ಪುಸ್ತಕ ರಾಷ್ಟ್ರೀಯ ತೋಟಗಾರಿಕೆ ಮಿಶನ್ನಿನಡಿ ತೋಟಗಾರಿಕಾ ಇಲಾಖೆಯ ನೆರವಿನಲ್ಲಿ ಹಾಗೂ ಎರಡನೇ ಪುಸ್ತಕ ಕೃಷಿ ಇಲಾಖೆಯ ಜೈವಿಕ ಗ್ರಾಮ ಯೋಜನೆಯಡಿ ಪ್ರಕಟಗೊಂಡಿವೆ. ಎರಡರಲ್ಲೂ ರಾಸಾಯನಿಕ ರಹಿತ ಕೃಷಿಯ ಹಲವಾರು ಉಪಯುಕ್ತ ವಿಚಾರಗಳನ್ನು ವಿವರಿಸಲಾಗಿದೆ. ಸಾವಯವ ಎನ್ನುವುದು ಕೇವಲ ಕೃಷಿಗೆ ಮಾತ್ರ ಸೀಮಿತ ಆಗಬಾರದು; ನಮ್ಮ ಇಡೀ ಜೀವನವೇ ಸಾವಯವ ಆಗಬೇಕು ಎಂಬ ನಿಲುವು ಕೇಶವ ಮೂರ್ತಿ ಅವರದು. ಮಧ್ಯವರ್ತಿಗಳಿಂದಾಗುವ ಶೋಷಣೆ ತಪ್ಪಿಸಲು ರೈತರೇ ವ್ಯಾಪಾರಿಗಳಾಗಬೇಕು ಎನ್ನುವುದು ವಿಜಯ ಅಂಗಡಿ ಅವರ ಪ್ರತಿಪಾದನೆ. ಅಕಾಶವಾಣಿಯಲ್ಲಿ 'ಸಾವಯವ ಕೃಷಿರಂಗ'ವನ್ನು ಪರಿಣಾಮಕಾರಿಯಾಗಿ ಬಿತ್ತರಿಸುವ ಇಬ್ಬರೂ ಲೇಖಕರು ತಮ್ಮ ವಿಶಾಲ ಅನುಭವವನ್ನು ಆಧರಿಸಿ ಈ ಪುಸ್ತಕಗಳನ್ನು ರಚಿಸಿದ್ದಾರೆ.

ಸಂಪರ್ಕ :
ಕೇಶವ ಮೂರ್ತಿ 9480056960, ವಿಜಯ ಅಂಗಡಿ 9448996495

**ಈ ಸಂಚಿಕೆಯ ಪ್ರಾಯೋಜಕರು : ಮುರಳಿಕೃಷ್ಣ ಕೆ., ಬೆಂಗಳೂರು**
ಮುಂದಿನ ಮೂರು ಸಂಚಿಕೆಗಳಿಗಾಗಿ ಬೆಂಗಳೂರಿನ ಎನ್.ಆರ್. ಶೆಟ್ಟಿ,
ಮೈಸೂರಿನ ಬರ್ಟಿ ಒಲಿವೆರಾ – ಗುರುಪ್ರಸಾದ್ ಪಿ. – ಡಾ. ಎಂ.ಸಿ. ಮನೋಹರ್ ಹಾಗೂ
ಅಹ್ಮದ್‌ನಗರದ ಸುಮಂಗಲಾ – ಆರ್. ಸಿ. ಭಟ್ ದೇಣಿಗೆ ನೀಡಿದ್ದಾರೆ.
ಕಾಮ್ ಹಿತೈಷಿಗಳು ಸಂಚಿಕೆಗಳನ್ನು ಪ್ರಾಯೋಜಿಸುವಂತೆ ವಿನಂತಿ. ಒಂದು ಸಂಚಿಕೆಯ ವೆಚ್ಚ 3 ಸಾವಿರ ರೂಪಾಯಿ.

**'ಕಾಮ್ ನ್ಯೂಸ್'** ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆ. ಇದು ಖಾಸಗಿ ಪ್ರಸಾರಕ್ಕಾಗಿ ಮಾತ್ರ..
ಸಂಪಾದಕಿ: ಅನಿತಾ ಪೈಲೂರು, ವಿಳಾಸ: ಕೃಷಿ ಮಾಧ್ಯಮ ಕೇಂದ್ರ, #119, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ನಾರಾಯಣಪುರ , ಧಾರವಾಡ – 580 008
Email: caam@sancharnet.in ◆ Website: www.farmedia.org ✆ : 9900517749
ವಿನ್ಯಾಸ: ಆರ್ಟೆಕ್, ಧಾರವಾಡ ◆ ಮುದ್ರಣ: ಆಕೃತಿ ಕಂಪ್ಯೂಟರ್ಸ್, ಮಂಗಳೂರು